**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು - 560 001.**

ಸಂಖ್ಯೆ: DPI-CPI0C2-5(OTH)/5/2021/E-641402 ದಿನಾಂಕ: 09.06.2022

**-: ಜ್ಞಾಪನ :-**

**ವಿಷಯ:** 1999ನೇ ಸಾಲಿನಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ನೇಮಕಗೊಂಡು ಸತತ 20 ವರ್ಷಗಳ ಸೇವೆಯನ್ನು ಸಲ್ಲಿಸಿರುವ **ದಾವಣಗೆರೆ ಜಿಲ್ಲಾ** ವ್ಯಾಪ್ತಿಯ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಗ್ರೂಫ್-ಬಿ ವೃಂದದ ಅಧಿಕಾರಿಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** 01.ಅಧಿಸೂಚನೆ ಸಂಖ್ಯೆ: ಡಿಪಿಎಆರ್ 4 ಎಸ್.ಡಿ.ಇ 2005 ದಿನಾಂಕ: 04/04/2005.
02.ಸರ್ಕಾರದ ಪತ್ರ ಸಂಖ್ಯೆ: ಇಡಿ 40 ಎಸ್ಒಹೆಚ್ 2019 ಬೆಂಗಳೂರು ದಿನಾಂಕ:16/08/2021
03.ಈ ಕಛೇರಿ ಪತ್ರ ಸಂಖ್ಯೆ:ಸಿ1(5)20ವ.ಹೆ.ವೇ.ಬ.ಮಂ/32019-20 ದಿನಾಂಕ: 25/08/2021
04.ಸರ್ಕಾರಿ ಆದೇಶ ಸಂಖ್ಯೆ: ಎಫ್ ಡಿ 30 ಎಸ್. ಆರ್.ಪಿ.2012 ದಿನಾಂಕ: 31/01/2014
05.ಸರ್ಕಾರಿ ಆದೇಶ ಸಂಖ್ಯೆ: ಎಫ್ ಡಿ 31 ಎಸ್. ಆರ್.ಪಿ 2007 (iii) ದಿನಾಂಕ: 14/08/2008
06.ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ ರವರು ಸಲ್ಲಿಸಿರುವ ಗ್ರೂಪ್ ಬಿ ವೃಂದದ ಅಧಿಕಾರಿಗಳ 20ವರ್ಷಗಳ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಪ್ರಸ್ತಾವನೆಗಳು.

******

**ಪ್ರಸ್ತಾವನೆ:**

ಉಲ್ಲೇಖ (1) ರ ಸರ್ಕಾರದ ಅಧಿಸೂಚನೆ ಪ್ರಕಾರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ/ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ನೇಮಕಾತಿ ಪ್ರಾಧಿಕಾರ ಆಗಿರುತ್ತಾರೆ.

1999 ನೇ ಸಾಲಿನಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ನೇಮಕಗೊಂಡು ಸತತ 20 ವರ್ಷಗಳ ಕಾಲ ಯಾವುದೇ ಮುಂಬಡ್ತಿ ಇಲ್ಲದೇ, ನಿರಂತರ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವ ಸಂಬಂಧ ಉಲ್ಲೇಖ (4) ಸರ್ಕಾರಿ ಆದೇಶದಂತೆ 20 ವರ್ಷಗಳ ಸೇವೆಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ಅರ್ಹರಿದ್ದು, ಉಲ್ಲೇಖ (6) ರಲ್ಲಿ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ ರವರು ಸಲ್ಲಿಸಿರುವ ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಅಧಿಕಾರಿಗಳಿಗೆ 20 ವರ್ಷಗಳ ಸೇವೆಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ಶಿಫಾರಸ್ಸು ಮಾಡಿ, ಅಗತ್ಯವಿರುವ ದಾಖಲೆಗಳನ್ನು ಲಗತ್ತಿಸಿ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿಯವರಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

**ದಾವಣಗೆರೆ ಜಿಲ್ಲಾ** ವ್ಯಾಪ್ತಿಯ ಈ ಕೆಳಕಂಡ ಕೋಷ್ಟಕದಲ್ಲಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ/ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳು ನಿರಂತರವಾಗಿ 20 ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ಉಲ್ಲೇಖ [2]ರ ಸರ್ಕಾರದ ನಿರ್ದೇಶನದಂತೆ ಹಾಗೂ ಉಲ್ಲೇಖ[4] ಮತ್ತು [5] ರ ಆದೇಶಗಳಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಈ ಕೆಳಕಂಡ ಕೋಷ್ಟಕದಲ್ಲಿ ಪ್ರಸ್ತಾಪಿಸಿರುವ 02

ಅಧಿಕಾರಿಗಳ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ ಜಾರಿಗೆ ಬರುವಂತೆ 20 ವರ್ಷಗಳ ಸೇವೆಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿ ಆದೇಶಿಸಿದೆ.

| **ಕ್ರ. ಸಂ** | **ಅಧಿಕಾರಿಗಳ ಹೆಸರು, ಪದನಾಮ, ವಿಳಾಸ ಶ್ರೀ/ಶ್ರೀಮತಿ** | **ಗ್ರೂಪ್ ಬಿ ಹುದ್ದೆಯಲ್ಲಿ ಸೇವೆಗೆ ಸೇರಿದ ದಿನಾಂಕ** | **20ವರ್ಷ ಹೆಚ್ಚುವರಿ ವೇತನ ಬಡ್ತಿ ಅರ್ಹತಾ ದಿನಾಂಕ** | **ಹಾಲಿ ಪಡೆಯುತ್ತಿರುವ ವೇತನ ಶ್ರೇಣಿ (ರೂ)** | **20 ವರ್ಷಗಳ ಪೂರ್ಣಗೊಂಡ ನಂತರದ ವೇತನ/ವೇತನ ಶ್ರೇಣಿ (ರೂ)** |
|---|---|---|---|---|---|
| 1 | ಸೋಮಶೇಖರಪ್ಪ.ಕೆ<br>ಮುಖ್ಯ ಶಿಕ್ಷಕರು,<br>ಸರ್ಕಾರಿ ಪ್ರೌಢಶಾಲೆ<br>ನಾಗನೂರು,<br>ದಾವಣಗೆರೆ ದಕ್ಷಿಣ ವಲಯ | 18-11-1999 | 18-11-2019 | 48900-92700 | ವೇತನ ಶ್ರೇಣಿ (48900-92700) ರಲ್ಲಿ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿದೆ. |
| 2 | ಗೌಸ್ ಮೊಹಿದ್ದೀನ್.ಡಿ<br>ಮುಖ್ಯ ಶಿಕ್ಷಕರು,<br>ಸರ್ಕಾರಿ ಪ್ರೌಢಶಾಲೆ<br>ನಾಗರಸನಹಳ್ಳಿ,<br>ದಾವಣಗೆರೆ ದಕ್ಷಿಣ ವಲಯ | 18-11-1999 | 18-11-2019 | 48900-92700 | ವೇತನ ಶ್ರೇಣಿ (48900-92700) ರಲ್ಲಿ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿದೆ. |

**[ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ]**

**ಡಾ.ರೂಪಶ್ರೀ.ಎಸ್. ಕೆ.ಎ.ಎಸ್.,**
**ಜಂಟಿನಿರ್ದೇಶಕರು (ಆಡಳಿತ)**

09/06/22

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ ರವರಿಗೆ ಮುಂದಿನ ಕ್ರಮಕ್ಕಾಗಿ.
3. ಸಂಬಂಧಿಸಿದ ಅಧಿಕಾರಿಗಳಿಗೆ (ಆಯಾ ಕಛೇರಿ ಮುಖ್ಯಸ್ಥರ ಮೂಲಕ).

**ಪ್ರತಿಯನ್ನು:**

4. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಣೆಗಾಗಿ.
6. ಕಛೇರಿಪ್ರತಿ.